ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನ- ಕರ್ನಾಟಕ
ರಾಜ್ಯ ಯೋಜನಾ ನಿರ್ದೇಶಕರ ಕಛೇರಿ
ಹೊಸ ಸಾರ್ವಜನಿಕ ಕಟ್ಟಡಗಳ
ಪೂರಕ ಕಟ್ಟಡ, ನೃಪತುಂಗರಸ್ತೆ, ಬೆಂಗಳೂರು -೫೬೦ ೦೦೧.

ಸಂಖ್ಯೆ: ಆರ್.ಎಂ.ಎಸ್.ಎ./ಆ.ವಿ/2018-19ನೇ ಸಾಲಿನ ದಾಖಲಾತಿ/2018-19 ದಿನಾಂಕ:09/05/2018

## ದಾಖಲಾತಿ ಸುತ್ತೋಲೆ

| | | |
|---|---|---|
| ವಿಷಯ : | 2018-19ನೇ ಸಾಲಿನ 6ನೇ ತರಗತಿ ವಿದ್ಯಾರ್ಥಿಗಳನ್ನು ದಾಖಲಾತಿ ಮಾಡಿಕೊಳ್ಳುವ ಬಗ್ಗೆ. | |
| ಉಲ್ಲೇಖ: | (1) | ದಿನಾಂಕ 11/03/2018 ರಂದು ನಡೆಸಲಾದ ಆಯ್ಕೆ ಪರೀಕ್ಷೆ. |
| | (2) | ಫಲಿತಾಂಶ ಪ್ರಕಟಣೆ ದಿನಾಂಕ 07/05/2018. |

****

ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖ(1)ರನ್ವಯ ಆದರ್ಶ ವಿದ್ಯಾಲಯಗಳ ದಾಖಲಾತಿಗಾಗಿ ನಡೆಸಲಾದ ಪ್ರವೇಶ ಪರೀಕ್ಷೆಯ ಫಲಿತಾಂಶವನ್ನು ಪ್ರಕಟಿಸಲಾಗಿದೆ. ಶಿಕ್ಷಣ ಇಲಾಖೆಯ Web Site (schooleducation.kar.nic.in)ನಲ್ಲಿ ಮತ್ತು ವಿದ್ಯಾವಾಹಿನಿಯ Web Site (vidyavahini.karnataka.gov.in) ಮೂಲಕ ವಿದ್ಯಾರ್ಥಿಗಳ ಆಯ್ಕೆಯ ವಿವರವನ್ನು ಪಡೆಯಬಹುದಾಗಿದೆ.

ಆಯ್ಕೆಯಾದ ವಿದ್ಯಾರ್ಥಿಗಳನ್ನು 2018-19ನೇ ಸಾಲಿಗೆ 6ನೇ ತರಗತಿಗೆ ದಾಖಲಾತಿ ಮಾಡಿಕೊಳ್ಳಬೇಕಾಗಿದೆ. ಈ ನಿಟ್ಟಿನಲ್ಲಿ ಕೆಳಕಂಡ ಸೂಚನೆಗಳನ್ನು ಅನುಸರಿಸುವಂತೆ ತಿಳಿಸಲಾಗಿದೆ.

1. ಈ ಹಿಂದಿನ ಸಾಲಿನಲ್ಲಿ ಪ್ರಕಟಿಸಿದಂತೆ ಆಯ್ಕೆಯಾದ ಮತ್ತು ಅರ್ಹತೆಯನ್ನು ಪಡೆದಿರುವ ಎಲ್ಲ ಮಕ್ಕಳ ಪಟ್ಟಿಯನ್ನು ಪ್ರಕಟಿಸಿರುವುದಿಲ್ಲ. ವಿದ್ಯಾರ್ಥಿಗಳು ತಮ್ಮ ಅರ್ಜಿಯ ಕ್ರಮ ಸಂಖ್ಯೆ ಅಥವಾ ಎಸ್.ಎ.ಟಿ.ಎಸ್ ಕ್ರಮ ಸಂಖ್ಯೆ ಅಥವಾ ಪರೀಕ್ಷೆಯ ನೋಂದಣಿ ಸಂಖ್ಯೆಯನ್ನು Web Site (schooleducation.kar.nic.in)ನಲ್ಲಿ ಮತ್ತು ವಿದ್ಯಾವಾಹಿನಿಯ ತಂತ್ರಾಂಶದಲ್ಲಿ ಅಳವಡಿಸಲಾಗಿರುವ "2018-19ನೇ ಸಾಲಿನಲ್ಲಿ ಆದರ್ಶ ವಿದ್ಯಾಲಯ 6ನೇ ತರಗತಿಗೆ ದಾಖಲಾತಿ" ಎಂಬ ಲಿಂಕ್ ಮೂಲಕ ಅಳವಡಿಸಿ ಪಡೆಯಬಹುದಾಗಿದೆ.
2. 2018-19ನೇ ಸಾಲಿನ ಆದರ್ಶ ವಿದ್ಯಾಲಯ 6ನೇ ತರಗತಿಗೆ ದಾಖಲಾತಿ ಪಡೆಯಲು ನಡೆಸಲಾಗುವ ಆಯ್ಕೆ ಪರೀಕ್ಷೆಗೆ ಅರ್ಜಿ ಪ್ರಕ್ರಿಯೆ ಎಂಬ ಶೀರ್ಷಿಕೆಯಡಿಯಲ್ಲಿ ಕೆಳಕಂಡ ಕ್ರಮ ಸಂಖ್ಯೆಗಳ ಸೂಚನೆಗಳನ್ನು ಅನುಸರಿಸಿ ಫಲಿತಾಂಶ ಮತ್ತು ಇತರೆ ವಿವರಗಳನ್ನು ಪಡೆಯಬಹುದಾಗಿದೆ.
   - ಕ್ರಮ ಸಂಖ್ಯೆ 10ರಲ್ಲಿ ಗಳಿಸಿದ ಅಂಕಗಳು ಪರಿಶೀಲಿಸಿ (Check Marks obtained)
   - ಕ್ರಮ ಸಂಖ್ಯೆ 11ರಲ್ಲಿ 1ನೇ ಸುತ್ತಿನಲ್ಲಿ ಆಯ್ಕೆ ಸ್ಥಾನವನ್ನು ಪರಿಶೀಲಿಸಿ (Check Seats Allotted in Round 1)
   - ಆಯ್ಕೆಯಾಗಿರುವುದರ ಬಗ್ಗೆ ಖಾತ್ರಿಗಾಗಿ ಮಕ್ಕಳ ವಿವರಗಳುಳ್ಳ Allotment Card ನ್ನು ಮುದ್ರಿಸಿ ಪಡೆದುಕೊಳ್ಳಬಹುದಾಗಿದೆ.

**ವಿಶೇಷ ಸೂಚನೆ :** Allotment Cardನಲ್ಲಿನ ವಿದ್ಯಾರ್ಥಿಯ ವಿವರಗಳ ಆಧಾರದ ಮೇರೆಗೆ ಆಯ್ಕೆಯನ್ನು ಮಾಡಲಾಗಿದೆ. ಇದರಲ್ಲಿನ ಯಾವುದೇ ಮಾಹಿತಿಯು ತಪ್ಪಾಗಿದ್ದರೆ, ಆಯ್ಕೆಯನ್ನು ತಿರಸ್ಕರಿಸಲಾಗುವುದು.

- ಕ್ರಮ ಸಂಖ್ಯೆ 12ರಲ್ಲಿ ಕಟ್ ಆಫ್ ಮಾರ್ಕ್ಸ್ ಪರಿಶೀಲಿಸಿ (Check Cut-off Marks)

3. ಮೊದಲನೆಯ ಹಂತದ ಆಯ್ಕೆಪಟ್ಟಿಯಲ್ಲಿ ಆಯ್ಕೆಯಾದ ವಿದ್ಯಾರ್ಥಿಗಳಿಗೆ ಆದರ್ಶ ವಿದ್ಯಾಲಯಕ್ಕೆ ದಾಖಲಾತಿಯಾಗಲು ದಿನಾಂಕ 16/05/2018 ರಿಂದ 25/05/2018 ರಂದು ಸಂಜೆ 5.00 ಗಂಟೆಯವರೆಗೆ ಕಾಲಾವಕಾಶ ನೀಡಿದೆ. ಈ ಅವಧಿಯ ನಂತರ ದಾಖಲಾತಿಗಾಗಿ ಬರುವ ವಿದ್ಯಾರ್ಥಿಗಳನ್ನು ದಾಖಲಾತಿ ಮಾಡಿಕೊಳ್ಳಲಾಗುವುದಿಲ್ಲ.
4. ವಿದ್ಯಾವಾಹಿನಿಯ ತಂತ್ರಾಂಶದಲ್ಲಿ ವಿವಿಧ ಹಂತಗಳಲ್ಲಿ ಆಯ್ಕೆಯಾಗುವ ಎಲ್ಲಾ ವಿದ್ಯಾರ್ಥಿಗಳ ಆಯ್ಕೆಪಟ್ಟಿಯನ್ನು ಪ್ರಕಟಿಸಲಾಗುವುದು. ಆದರ್ಶ ವಿದ್ಯಾಲಯದ ಮುಖ್ಯೋಪಾಧ್ಯಾಯರು ತಮ್ಮ ಲಾಗಿನ್‌ನಲ್ಲಿ ಮಾತ್ರ ಈ ಮಾಹಿತಿಯನ್ನು ಪಡೆಯಬಹುದಾಗಿದೆ. ದಾಖಲಾತಿ ಬಯಸುವ ವಿದ್ಯಾರ್ಥಿಗಳ Allotment Card ಹಾಗೂ ಎಲ್ಲಾ ಮೂಲ ದಾಖಲೆಗಳನ್ನು ಪರಿಶೀಲಿಸಿ ಸಮರ್ಪಕವಾಗಿ ಹಾಗೂ ನಿಯಮಾನುಸಾರವಾಗಿದ್ದಲ್ಲಿ ಮಾತ್ರ ದಾಖಲಾತಿಯನ್ನು ಮಾಡಿಕೊಳ್ಳುವುದು.
5. ಹೊರ ರಾಜ್ಯದಲ್ಲಿ ಅಥವಾ ಆಯ್ಕೆ ಮಾಡಿಕೊಂಡಿರುವ ಆದರ್ಶ ವಿದ್ಯಾಲಯದ ತಾಲ್ಲೂಕಿನಲ್ಲಿ ವ್ಯಾಸಂಗ/ವಾಸ ಮಾಡುತ್ತಿರುವ ವಿದ್ಯಾರ್ಥಿಗಳ ವಾಸಸ್ಥಳ ದೃಢೀಕರಣ ಪ್ರಮಾಣಪತ್ರವನ್ನು ಕಡ್ಡಾಯವಾಗಿ ಪಡೆದು ಅದರ ಮೂಲ ಪ್ರತಿಯನ್ನು ಶಾಲೆಯಲ್ಲಿಯೇ ಶೇಖರಿಸಿ ನಿರ್ವಹಣೆ ಮಾಡುವಂತೆ ತಿಳಿಸಿದೆ.
6. ಮೊದಲ ಸುತ್ತಿನಲ್ಲಿ ಪ್ರವೇಶ ಪಡೆದ ನಂತರ ವಿದ್ಯಾರ್ಥಿಗಳ ವರ್ಗಾವಣೆ ಪ್ರಮಾಣ ಪತ್ರವನ್ನು SATSನಲ್ಲಿ ಮೂಲ ಶಾಲೆಯಿಂದ ಆದರ್ಶ ವಿದ್ಯಾಲಯಗಳಿಗೆ ದಿನಾಂಕ 02/06/2018ರೊಳಗಾಗಿ ವರ್ಗಾವಣೆಗೊಳಿಸುವಲ್ಲಿ ಕ್ಷೇತ್ರ ಶಿಕ್ಷಣಾಧಿಕಾರಿಗಳು ಹಾಗೂ ಕ್ಷೇತ್ರ ಸಮನ್ವಯಾಧಿಕಾರಿಗಳು ಸೂಕ್ತ ಕ್ರಮ ವಹಿಸುವುದು.
7. ಮೂಲ ದಾಖಲೆಗಳು ಸರಿಯಾಗಿಲ್ಲದಿದ್ದಲ್ಲಿ ಅಥವಾ ನೀಡಿರುವ ಮಾಹಿತಿಯು ತಪ್ಪಾಗಿದೆ ಎಂದು ಮುಂದಿನ ದಿನಗಳಲ್ಲಿ ಕಂಡು ಬಂದಲ್ಲಿ ಆ ವಿದ್ಯಾರ್ಥಿಯನ್ನು ಮೂಲ ಶಾಲೆಗೆ ಅಥವಾ ಹತ್ತಿರದ ಸರಕಾರಿ ಶಾಲೆಗೆ ವರ್ಗಾವಣೆ ನೀಡಲಾಗುವುದು. ಇಂತಹ ಪ್ರಕರಣಗಳಿಗೆ ಆದರ್ಶ ವಿದ್ಯಾಲಯದ ಮುಖ್ಯ ಶಿಕ್ಷಕರನ್ನು ನೇರ ಹೊಣೆಗಾರರನ್ನಾಗಿ ಮಾಡಲಾಗುವುದು.
8. ದಾಖಲಾದ ವಿದ್ಯಾರ್ಥಿಯ ಮಾಹಿತಿಯನ್ನು ವಿದ್ಯಾವಾಹಿನಿಯ ತಂತ್ರಾಂಶದಲ್ಲಿ ನೀಡಲಾಗಿರುವ "Admit" ಎಂಬಲ್ಲಿ ಕ್ಲಿಕ್ಕಿಸಿ Update ಮಾಡುವುದು.
9. ಪ್ರಕಟಿಸಲಾಗುವ ಎಲ್ಲಾ ಹಂತದ ಆಯ್ಕೆ ಪಟ್ಟಿಗೂ ಸಹ ಈ ಮೇಲಿನ ಸೂಚನೆಗಳನ್ನು ಅನುಸರಿಸಿ ದಾಖಲಾತಿ ಮಡಿಕೊಳ್ಳತಕ್ಕದ್ದು.
10. ಆದರ್ಶ ವಿದ್ಯಾಲಯಕ್ಕೆ ಆಯ್ಕೆಯಾದ ವಿದ್ಯಾರ್ಥಿಗಳ ದಾಖಲಾತಿಯನ್ನು ಪ್ರಾರಂಭಿಸಿರುವ ಬಗ್ಗೆ ಈಗಾಗಲೇ ಪೋಷಕರು ನೀಡಿರುವ ಮೊಬೈಲ್ ಸಂಖ್ಯೆಗೆ ಸಂದೇಶ ಕಳುಹಿಸಿದೆ. ಆದರೂ ಸಹ ಇದರ ಬಗ್ಗೆ ಎಲ್ಲಾ ಸ್ಥರದ ಅಧಿಕಾರಿಗಳು ವ್ಯಾಪಕ ಪ್ರಚಾರ ನೀಡುವಂತೆ ತಿಳಿಸಿದೆ.

ಉಳಿದಂತೆ 7, 8, 9 ಮತ್ತು 10ನೇ ತರಗತಿಗಳಲ್ಲಿ ಖಾಲಿ ಇರುವ ಸೀಟುಗಳಿಗೆ ಈ ಹಿಂದಿನ ಸಾಲುಗಳಲ್ಲಿ ನೀಡಿರುವ ಸೂಚನೆಯಂತೆ ಅಗತ್ಯ ಕ್ರಮವಹಿಸುವುದು.

ವಿದ್ಯಾರ್ಥಿಗಳ ದಾಖಲಾತಿಗೆ ಸಂಬಂಧಿಸಿದಂತೆ ಅನಗತ್ಯವಾಗಿ ರಾಜ್ಯ ಕಛೇರಿಗೆ ಪತ್ರ ಬರೆಯದೆ ಉಪನಿರ್ದೇಶಕರು, ಕ್ಷೇತ್ರ ಶಿಕ್ಷಣಾಧಿಕಾರಿಗಳು ಮತ್ತು ಮುಖ್ಯ ಶಿಕ್ಷಕರು ತಮ್ಮ ಹಂತದಲ್ಲಿಯೇ ನಿಯಮಾನುಸಾರ ಕ್ರಮವಹಿಸಲು ತಿಳಿಸಿದೆ.

ರಾಜ್ಯ ಯೋಜನಾ ನಿರ್ದೇಶಕರು
ಎಸ್.ಎಸ್.ಎ ಮತ್ತು ಆರ್.ಎಂ.ಎಸ್.ಎ.
ಬೆಂಗಳೂರು

ಗೆ,

1. ಸಂಬಂಧಿಸಿದ ಜಿಲ್ಲೆಯ ಉಪನಿರ್ದೇಶಕರು(ಆಡಳಿತ) ರವರು, ಈ ಸಂಬಂಧ ಉಪನಿರ್ದೇಶಕರು ದಿನಾಂಕ 15/05/2018ರೊಳಗಾಗಿ ಇದರ ಬಗ್ಗೆ ಜಿಲ್ಲಾ ಹಂತದಲ್ಲಿ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳು ಮತ್ತು ಮುಖ್ಯ ಶಿಕ್ಷಕರ ಸಭೆಯನ್ನು ಕರೆದು ಅಗತ್ಯ ಮಾರ್ಗದರ್ಶನ ನೀಡಲು ತಿಳಿಸಿದೆ.
2. ಸಂಬಂಧಿಸಿದ ಜಿಲ್ಲೆಯ DyPC, RMSA ರವರಿಗೆ ಅಗತ್ಯ ಕ್ರಮಕ್ಕಾಗಿ.
3. ಸಂಬಂಧಿಸಿದ ತಾಲ್ಲೂಕಿನ ಕ್ಷೇತ್ರ ಶಿಕ್ಷಣಾಧಿಕಾರಿಗಳು ರವರಿಗೆ ಅಗತ್ಯ ಕ್ರಮಕ್ಕಾಗಿ.
4. ಸಂಬಂಧಿಸಿದ ಶಾಲೆಗಳ ಮುಖ್ಯೋಪಾಧ್ಯಾಯರಿಗೆ ಅಗತ್ಯ ಕ್ರಮಕ್ಕಾಗಿ.

**ಪ್ರತಿಯನ್ನು**

1. ಮಾನ್ಯ ಪ್ರಧಾನ ಕಾರ್ಯದರ್ಶಿಗಳು, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ, ಕರ್ನಾಟಕ ಸರ್ಕಾರ, ರವರಿಗೆ ಮಾಹಿತಿಗಾಗಿ ಸಲ್ಲಿಸಿದೆ.
2. ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ರವರಿಗೆ ಮಾಹಿತಿಗಾಗಿ ಸಲ್ಲಿಸಿದೆ.